# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1552
ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್
ಉತ್ತರಿಸುವ ದಿನಾಂಕ : 24-09-2021
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಡಾ: ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ಇವುಗಳ ನಿರ್ದೇಶಕರ ಹುದ್ದೆಯ ನೇಮಕಾತಿ ನಿಯಮಾವಳಿಗಳು ಒಂದೇ ರೀತಿಯವೇ; ಅಥವಾ ಬೇರೆ ಬೇರೆಯದೇ ನಿಯಮಾವಳಿಗಳೇ; | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಡಾ: ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ಇವುಗಳ ನಿರ್ದೇಶಕರ ಹುದ್ದೆಯ ನೇಮಕಾತಿ ನಿಯಮಾವಳಿಗಳು ಬೇರೆ ಬೇರೆ ಇವೆ. |
| ಆ) | ಒಂದೇ ನಿಯಮಾವಳಿ ಗಳಾಗಿದ್ದಲ್ಲಿ ಡಾ: ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಕೆ.ಎ.ಎಸ್ ಅಧಿಕಾರಿಗಳನ್ನು ನೇಮಕ ಮಾಡುವಾಗ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ನೇಮಕ ಮಾಡಲು ಕೆ.ಎ.ಎಸ್. ಅಧಿಕಾರಿಗಳು ಅನರ್ಹರೇ; | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದ್ದು, ಭಾರತ ಸರ್ಕಾರದ ನಿರ್ದೇಶನದಂತೆ ಸದರಿ ಸಂಸ್ಥೆಗೆ ನಿರ್ದೇಶಕರನ್ನು ನೇಮಕ ಮಾಡಬೇಕಾಗಿದ್ದು, ಅದರಂತೆ ವೃಂದ ಮತ್ತು ನೇಮಕಾತಿ ನಿಯಮಗಳಂತೆ ರೂಪಿಸಲಾಗಿದೆ.<br><br>ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನೇಮಕಾತಿ ನಿಯಮದಂತೆ ಈ ಹುದ್ದೆಗೆ ನೇರ ನೇಮಕಾತಿ & ನಿಯೋಜನೆ ಮೇರೆಗೆ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ನಿಯೋಜನೆ ಮೇರೆಗೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಅಥವಾ ಸರ್ಕಾರದಿಂದ ಗುರುತಿಸಲ್ಪಟ್ಟಿರುವ ಪ್ರೀಮಿಯಂ ಸಂಶೋಧನಾ ಸಂಸ್ಥೆಗಳಲ್ಲಿ Anthropology ವಿಷಯದಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿರುವವರು & ಸೂಪರ್ ಟೈಮ್ ಸ್ಕೇಲ್ ಕೆ.ಎ.ಎಸ್ ಅಧಿಕಾರಿಯನ್ನು ನಿಯೋಜನೆ ಮಾಡಬಹುದು.<br><br>ನೇರ ನೇಮಕಾತಿಯಲ್ಲಿ Anthropology ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರಬೇಕು ಮತ್ತು Anthropology ವಿಭಾಗದಲ್ಲಿ 5 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಬೇಕು. |

| | | |
|---|---|---|
| ಇ) | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಸೇವೆಗೆ ವರ್ಗಾವಣೆ, ಮಾರ್ಗಸೂಚಿಗಳು ಅನ್ವಯವಾಗುವುದಿಲ್ಲವೆ; ಸದರಿ ಅಧಿಕಾರಿಯವರನ್ನು ಪ್ರಾರಂಭದಲ್ಲಿ ನಿಯೋಜನೆ ನೇಮಕಾತಿ ಮಾಡಿಕೊಂಡು 09 ವರ್ಷಗಳ ನಂತರ ಖಾಯಂ ನೇಮಕಾತಿ ಆದೇಶ ನೀಡಿರುವ ಕಾರಣ ಸದರಿ ಅಧಿಕಾರಿಯು ಮಾತ್ರವೇ ಅವರ ನಿವೃತ್ತಿಯ ಕಾಲದವರೆಗೂ ನಿರ್ದೇಶಕರ ಹುದ್ದೆಯಲ್ಲಿಯೇ ಮುಂದುವರೆಯುವರೆ; | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಇವರು ಮೂಲತಃ ಕರ್ನಾಟಕ ವಿಶ್ವ ವಿದ್ಯಾನಿಲಯ, ಧಾರವಾಡ ಇಲ್ಲಿ ಪ್ರಾಧ್ಯಾಪಕರಾಗಿದ್ದು, ಕಳೆದ 9 ವರ್ಷಗಳಿಂದ ನಿರ್ದೇಶಕರ ಹುದ್ದೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಇಲ್ಲಿ ನಿಯೋಜನೆ ಮೇರೆಗೆ ಸೇವೆ ಸಲ್ಲಿಸುತ್ತಿದ್ದು ಅವರ ಸೇವಾನುಭವವನ್ನು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16 (ಎ)(ii)ರಂತೆ ಸರ್ಕಾರದ ಆದೇಶ ಸಂಖ್ಯೆ: ಸಕಇ 118 ಎಸ್‌ಟಿಪಿ 2019, ದಿನಾಂಕ: 08/06/2021ರಲ್ಲಿ ಖಾಯಂ ಆಗಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಅವರ ಸೇವೆಯನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಮುಂದುವರೆಸಲಾಗಿದೆ. |
| ಈ) | ಕರ್ನಾಟಕದಲ್ಲಿ ಬುಡಕಟ್ಟು ಜನಾಂಗಗಳ ಕುಲಶಾಸ್ತ್ರ ಅಧ್ಯಯನದ ವರದಿಗೆ ಪೂರಕವಾಗಿ ವಿವರಗಳ ಸಮೀಕ್ಷಾ ಸಂಗ್ರಹಣಾ ನಮೂನೆಗಳಲ್ಲಿ ಪ್ರತಿ ಜಾತಿಗೂ ಬೇರೆ ಬೇರೆಯಾದ ಸಂಗ್ರಹಣಾ ನಮೂನೆಗಳಿವೆಯೇ; ಹಾಗಿದ್ದಲ್ಲಿ, ಬೇರೆ ಬೇರೆ ಜಾತಿಯ ಸಂಗ್ರಹಣಾ ನಮೂನೆಗಳ ವಿಭಿನ್ನತೆ ಏನು; (ವಿವರ ನೀಡುವುದು) | ಯಾವುದೇ ಒಂದು ಜಾತಿಯನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕಾದಲ್ಲಿ ಕುಲಶಾಸ್ತ್ರೀಯ ಅಧ್ಯಯನ ಮಾಡಿ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ. ಕುಲಶಾಸ್ತ್ರೀಯ ಅಧ್ಯಯನ ಮಾಡುವ ಸಂಧರ್ಭದಲ್ಲಿ ಆಯಾ ಜಾತಿಗೆ ಸಂಬಂಧಿಸಿದಂತೆ, ನಮೂನೆಗಳನ್ನು ಸಿದ್ದಪಡಿಸಿ ಸಮೀಕ್ಷೆ ಕಾರ್ಯ ಕೈಗೊಂಡು ವಿವರಗಳನ್ನು ಪಡೆಯಬೇಕಾಗಿದೆ. ಎಲ್ಲಾ ಜಾತಿಗಳ ಆಚಾರ ವಿಚಾರಗಳು, ಜೀವನ ಶೈಲಿ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಎಲ್ಲಾ ಜಾತಿಗಳಲ್ಲಿಯೂ ವಿಭಿನ್ನವಾಗಿರುವುದರಿಂದ ಅದರಂತೆ ವಿವರಗಳನ್ನು ಪಡೆಯಲಾಗುತ್ತಿದೆ. |
| ಉ) | ಬುಡಕಟ್ಟು ಜನಾಂಗಗಳ ಜಾತಿಯ ಕುಲಶಾಸ್ತ್ರ ಅಧ್ಯಯನದ ವರದಿಯನ್ನು ಸಂಶೋಧನಾ ಸಂಸ್ಥೆಯ ನಿರ್ದೇಶಕರೇ ಸಿದ್ಧಪಡಿಸುವರೆ; ಅಥವಾ ಸಂಸ್ಥೆಯ ವತಿಯಿಂದ ನೇಮಕ ಮಾಡುವ ಮಾನವ ಶಾಸ್ತ್ರ, ಸ್ನಾತಕೋತ್ತರ ಪದವೀಧರರ ತಂಡ ಸಿದ್ಧಪಡಿಸುವುದೇ; (ವಿವರ ನೀಡುವುದು) | ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ಅವರ ತಂಡವು ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ತದನಂತರದಲ್ಲಿ ಸದರಿ ವರದಿಯನ್ನು "Expert Committee" ಗೆ ಕಳುಹಿಸಿ ಅಭಿಪ್ರಾಯ ಪಡೆಯಲಾಗುತ್ತದೆ. ಅಂತಿಮವಾಗಿ ವರದಿಯನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಇವರ ಸಹಿಯೊಂದಿಗೆ ಅಧಿಕೃತವಾಗಿ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. |

| | | |
|---|---|---|
| ಊ) | ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಮಾನವ ಶಾಸ್ತ್ರ, ಸ್ನಾತಕೋತ್ತರ ಪದವಿ ಇಲ್ಲದ ಅಧಿಕಾರಿಯೂ ನೇಮಕವಾಗಬಹುದೇ? (ಮಾಹಿತಿ ನೀಡುವುದು) | ಕ್ರಮ ಸಂಖ್ಯೆ "ಆ" ದಲ್ಲಿ ಉತ್ತರ ನೀಡಲಾಗಿದೆ. |

ಸಕಇ 326 ಎಸ್‌ಟಿಪಿ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು.